ಬರಗಾಲಕ್ಕೆ ತುತ್ತಾಗಿರುವ ಪ್ರದೇಶಗಳು

೮೨೧(೧೫೯೭) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸದಾ ಬರಗಾಲದ ದವಡೆಗೆ ಒಳಗಾಗುತ್ತಿರುವ ಗಂಡಸಿ ಕ್ಷೇತ್ರದಂತಹ ಪ್ರದೇಶಗಳಿಗೆ, ಏನಾದರೂ ಸರ್ಕಾರ ಪರಿಹಾರ ಯೋಜನೆಯನ್ನು ಜಾರಿಗೆ ತರಲು ಆಲೋಚಿಸಿದೆಯೆ?

ಆ) ಹಾಗಿದ್ದಲ್ಲಿ ಈ ಕ್ಷೇತ್ರಕ್ಕೆ ಯಾವುದಾದರೂ ರೂಪದಲ್ಲಿ ಸೌಲಭ್ಯ ಒದಗಿಸುವ ಯೋಜನೆ ಇದೆಯೇ?

ಇ) ಮುಂಗಾರು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಮಳೆ ಬಾರದೆ ತೊಂದರೆಯಾಗಿರುವ ಈ ಕ್ಷೇತ್ರದ ಮಹಾಜನತೆಗೆ ಪರಿಹಾರ ಒದಗಿಸುವ ಆಲೋಚನೆ ಏನಾದರೂ ಇದೆಯೇ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಪರಿಸ್ಥಿತಿಯನ್ನನುಸರಿಸಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಆ) ಸದ್ಯದ ಪರಿಸ್ಥಿತಿಯಲ್ಲಿ ಈ ಪ್ರಶ್ನೆ ಸರ್ಕಾರದ ಮುಂದಿಲ್ಲ.

ಇ) ಜೂನ್ ಮಾಹೆಯಲ್ಲಿ ಮಳೆ ಬಾರದೆ ಗಂಡಸಿ ಕ್ಷೇತ್ರದಲ್ಲಿ ವ್ಯವಸಾಯ ಕಾರ್ಯಗಳಿಗೆ ತೊಂದರೆಯಾಗಿದೆ. ಮುಂದೆ ಮಳೆ ಬಿದ್ದರೆ ಪರಿಸ್ಥಿತಿ ಸುಧಾರಿಸಬಹುದು. ಇಲ್ಲದಿದ್ದಲ್ಲಿ ಪರಿಸ್ಥಿತಿಯನ್ನನುಸರಿಸಿ, ಸೂಕ್ತ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ತುಂಡು ಭೂಮಿ ಕಾಯಿದೆ

೮೨೨(೧೬೯೦) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯದಲ್ಲಿ ತುಂಡು ಭೂಮಿ ಕಾಯಿದೆ ಯಾವ ಯಾವ ಜಿಲ್ಲೆಗಳಿಗೆ ಅನ್ವಯಿಸುತ್ತದೆ?

ಆ) ಶಿವಮೊಗ್ಗ ಜಿಲ್ಲೆಗೆ ಈ ಕಾಯಿದೆ ಅನ್ವಯಿಸಿರುವುದರ ಔಚಿತ್ಯವೇನು?

ಇ) ಇಡೀ ರಾಜ್ಯದಲ್ಲಿ ಏಕ ರೀತಿಯ ಕಾಯಿದೆ ತಾರದಿರಲು ಕಾರಣವೇನು?

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿ ಉಳಿದೆಲ್ಲಾ ಜಿಲ್ಲೆಗಳಿಗೆ ಕರ್ನಾಟಕ ತುಂಡು ಭೂಮಿ ಹಿಡುವಳಿ ಕಾಯಿದೆ ಅನ್ವಯಿಸುತ್ತದೆ.

ಆ) ಪ್ರತಿಯೊಂದು ಜಿಲ್ಲೆಯ ಪ್ರಾಕೃತಿಕ ಸ್ವರೂಪವನ್ನು ಪರಿಗಣಿಸಿ ಈ ಕಾಯಿದೆಯನ್ನು ಅನ್ವಯಿಸಲಾಗಿದೆ.

ಇ) ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ರೀತಿಯ ಪ್ರಾಕೃತಿಕ ಸ್ವರೂಪ ಇಲ್ಲದಿರುವುದರಿಂದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಉಳಿದೆಲ್ಲಾ ಜಿಲ್ಲೆಗಳಿಗೆ ತುಂಡು ಭೂಮಿ ಕಾಯಿದೆ ಅನ್ವಯಿಸುತ್ತದೆ.

ರಾಜ್ಯದ ನಗರಪಾಲಿಕೆ ನೌಕರರಿಗೆ ಕೆ.ಸಿ.ಎಸ್.ಆರ್. ಮತ್ತು ಕೆ.ಎಂ.ಸಿ. ಕಾಯ್ದೆ ಅಳವಡಿಸುವ ಬಗ್ಗೆ

೮೨೪(೧೭೦೦) ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದ ಪುರಸಭೆ ಮತ್ತು ನಗರಸಭೆಗಳಿಗೆ ದಿನಾಂಕ ೪ನೇ ಫೆಬ್ರುವರಿ ೧೯೮೭ರಿಂದ ಕೆ.ಸಿ.ಎಸ್.ಆರ್. ಮತ್ತು ಕೆ.ಎಫ್.ಸಿ. ಕಾಯ್ದೆಯನ್ನು ರಾಜ್ಯದ ಮಹಾನಗರಪಾಲಿಕೆಗಳ ನೌಕರರಿಗೆ ಅಳವಡಿಸದೇ ಇರುವುದು ನಿಜವೆ?